(4) ತೆಗ್ಗಿ ತಾಂಡಾ

(5) ನರೆನೂರ ತಾಂಡಾ

ಇ) ಶಿವಾಪೂರ ಗ್ರಾಮದ ರಸ್ತೆಯ ಮುಖ್ಯ ರಸ್ತೆಯಿಂದ ಸಾಗುತ್ತಾ ಕೆರೆಯ ದಂಡೆಯ ಮೇಲೆ ಮುಂದುವರೆಯುವುದರಿಂದ ಸುರಕ್ಷಿತವಲ್ಲವಾದ್ದರಿಂದ ರಸ್ತೆಯ ಅಗಲೀಕರಣವಾದ ನಂತರ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುವುದು.

ಬಸ್ಸುಗಳ ಸೌಲಭ್ಯವಿಲ್ಲದ ಸಿದ್ಧಾಪೂರ ತಾಂಡಾ, ನಾಗರಾಳ ತಾಂಡಾ, ತೆಗ್ಗಿ ತಾಂಡಾ ಮತ್ತು ನರೆನೂರ ತಾಂಡಾಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸುವ 'ಬಗ್ಗೆ ಮಾರ್ಗ ಸಮೀಕ್ಷೆ ನಡೆಸಲಾಗಿದ್ದು ಶೀಘ್ರವಾಗಿ ಸಾರಿಗೆ ಸೌಲಭ್ಯವನ್ನು ಒದಗಿಸಲು ಕ್ರಮಕೈಗೊಳ್ಳಲಾಗುವುದು.

ಈ) ಬೀಳಗಿಯಿಂದ–ಬೆಂಗಳೂರಿಗೆ ವೋಲ್ವೋ ಬಸ್ ಸಂಚಾರ ವ್ಯವಸ್ಥೆಯು ಮೊದಲಿನಿಂದಲೂ ಇರುವುದಿಲ್ಲ.

ಆದರೆ ಈ ಮಾರ್ಗದಲ್ಲಿ ರಾಜಹಂಸ ಬಸ್ಸಿನ ಕಾರ್ಯಾಚರಣೆಯನ್ನು ಮಾಡಲಾಗುತ್ತಿದ್ದು ಸದರಿ ವಾಹನಕ್ಕೂ ನಿರೀಕ್ಷಿತ ಪ್ರಯಾಣಿಕರು ಇಲ್ಲದೆ ನಷ್ಟದಲ್ಲಿದ್ದಾಗ್ಯೂ, ಸಾರ್ವಜನಿಕರ ಹಿತದೃಷ್ಟಿಯಿಂದ ಸಂಚಾರವನ್ನು ಮುಂದುವರೆಸಲಾಗಿದೆ.

ಉ) ಪ್ರಶ್ನೆ "ಈ"ಗೆ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಸದ್ಯಕ್ಕೆ ಈ ಪ್ರಸ್ತಾವನೆಯು ಇರುವುದಿಲ್ಲ.

ಬಿಪಿಎಲ್ ಕಾರ್ಡುಗಳ ಹಂಚಿಕೆ

360(4265); ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಂಚಿಕೆ ಮಾಡಿರುವ ಬಿಪಿಎಲ್ ಕಾರ್ಡುಗಳ ಸಂಖ್ಯೆ ಎಷ್ಟು; (ವಿಧಾನ ಸಭಾ ಕ್ಷೇತ್ರವಾರು ವಿವರಗಳೇನು)

ಆ) ಬಿಪಿಎಲ್ ಕಾರ್ಡ್ ಹಂಚಿಕೆ ಮಾಡಬೇಕೆಂದು ಮನವಿ ಸಲ್ಲಿಸಿದವರು ಮತ್ತು ಪಡೆದುಕೊಂಡವರ ಸಂಖ್ಯೆ ಎಷ್ಟು; (ವಿವರಗಳನ್ನು ಒದಗಿಸುವುದು)

ಇ) ನಗರ ಪ್ರದೇಶಗಳಲ್ಲಿರುವ ಮಧ್ಯಮ ವರ್ಗದವರು ಹಾಗೂ ಬಿಪಿಎಲ್ ಕಾರ್ಡ್‌ಗಳನ್ನು ಪಡೆಯಲು ತೊಂದರೆಯಾಗುತ್ತಿರುವ ಬಡ–ಮಧ್ಯಮ ವರ್ಗದವರಿಗೆ ಅವರು ಹೊಂದಿರುವ ಎಪಿಎಲ್ ಕಾರ್ಡ್‌ಗಳಿಗೆ ಮಿತ ಪ್ರಮಾಣದಲ್ಲಿ ಪಡಿತರ ಧಾನ್ಯಗಳನ್ನು ವಿತರಿಸಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ದಿನೇಶ್ ಗುಂಡೂರಾವ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಸಚಿವರು)

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 28 ವಿಧಾನ ಸಭಾ ಕ್ಷೇತ್ರಗಳಿದ್ದು, ಸದರಿ ಕ್ಷೇತ್ರಗಳಲ್ಲಿ ಎಎವೈ ಕಾರ್ಡುಗಳು ಸೇರಿದಂತೆ ಒಟ್ಟು 5,90,624 ಬಿಪಿಎಲ್ ಕಾರ್ಡುಗಳು ಚಾಲ್ತಿಯಲ್ಲಿವೆ. ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ಈ ಕೆಳಕಂಡಂತಿದೆ.

ಕ್ರ.ಸಂ	ವಿಧಾನ ಸಭಾ ಕ್ಷೇತ್ರದ ಹೆಸರು	ಬಿಪಿಎಲ್
1	ದಾಸರಹಳ್ಳಿ	34,107
2	ಯಶವಂತಪುರ	30,510
3	ಮಹಾಲಕ್ಷ್ಮಿ ಲೇಔಟ್	24,680
4	ಸರ್ವಜ್ಞನಗರ	17,855
5	ಯಲಹಂಕ	51,623
6	ಬ್ಯಾಟರಾಯನಪುರ	40,524
7	ರಾಜರಾಜೇಶ್ವರಿನಗರ	28,133
8	ಬೊಮ್ಮನಹಳ್ಳಿ	30,145
9	ಬೆಂಗಳೂರು ದಕ್ಷಿಣ	43,540
10	ಕೆ.ಆರ್.ಪುರಂ	22,858
11	ಮಹದೇವಪುರ	41,586

12	ಆನೇಕಲ್	1,684
13	ಶಿವಾಜಿನಗರ	8,301
14	ಮಲ್ಲೇಶ್ವರಂ	9,389
15	ಹೆಬ್ಬಾಳ	7,542
16	ಪುಲಕೇಶಿನಗರ	15,041
17	ಗಾಂಧಿನಗರ	20,476
18	ಬಸವನಗುಡಿ	8,403
19	ಬಿಟಿಎಂ ಲೇಔಟ್	15,681
20	ಚಿಕ್ಕಪೇಟೆ	12,869
21	ಜಯನಗರ	13,171
22	ಪದ್ಮನಾಭನಗರ	19,214
23	ಶಾಂತಿನಗರ	11,289
24	ವಿಜಯನಗರ	21,927
25	ಚಾಮರಾಜಪೇಟೆ	17,580
26	ರಾಜಾಜಿನಗರ	12,668
27	ಸಿ.ವಿ.ರಾಮನ್ ನಗರ	10,051
28	ಗೋವಿಂದರಾಜ ನಗರ	19777
	ಒಟ್ಟು	**5,90,624**

ಆ) ಹೊಸ ಬಿಪಿಎಲ್ ಕಾರ್ಡ್ ಕೋರಿ ಅನ್‌ಲೈನ್‌ನಲ್ಲಿ 4,99,488 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 1,44,202 ಪಡಿತರ ಚೀಟಿ ವಿತರಣೆ ಮಾಡಲಾಗಿದ್ದು, 11,457 ಅರ್ಜಿಗಳನ್ನು ತಿರಸ್ಕರಿಸಲಾಗಿದೆ ಹಾಗೂ 2,97,119 ಅರ್ಜಿಗಳು ಪರಿಶೀಲನೆಗೆ ಬಾಕಿ ಇವೆ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಜಿಲ್ಲೆ/ವಲಯದ ಹೆಸರು	ಮನವಿ ಸಲ್ಲಿಸಿದವರು	ಪಡಿತರ ಚೀಟಿ ಪಡೆದು ಕೊಂಡಿರುವವರು	ಪಡಿತರ ಚೀಟಿ ಸಿದ್ದಗೊಂಡಿದ್ದು ವಿತರಣೆಗೆ ಬಾಕಿ ಇರುವುದು	ತಿರಸ್ಕೃತ ಅರ್ಜಿಗಳು	ಬಾಕಿ ಇರುವ ಅರ್ಜಿಗಳು
1	ಬಂಗಳೂರು ನಗರ ಜಿಲ್ಲೆ	2,12,308	69,255	35,972	3,704	1,03,377
2	ಬಂಗಳೂರು ಕೇಂದ್ರ ವಲಯ	40,549	7,000	1,915	2,237	29397
3	ಬಂಗಳೂರು ಪೂರ್ವ ವಲಯ	40,549	7,000	1,915	2,237	29,397
4	ಬಂಗಳೂರು ಉತ್ತರ ವಲಯ	63,429	19,674	2,231	1,939	39,585
5	ಬಂಗಳೂರು ದಕ್ಷಿಣ ವಲಯ	45,408	7,365	517	211	37,315
6	ಬಂಗಳೂರು ಪಶ್ಚಿಮ ವಲಯ	1,13,275	35493	4,796	2,934	70,052
	ಒಟ್ಟು	4,99,488	1,44,202	46,710	11,457	2,97,119

ಇ) ರಾಜ್ಯದಲ್ಲಿ ಜನವರಿ–2014ರಿಂದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಸದರಿ ಕಾಯ್ದೆಯಡಿಯಲ್ಲಿ ಎಪಿಎಲ್ ಮತ್ತು ಬಿಪಿಎಲ್ ಎಂಬ ವಿಂಗಡನೆ ಇರುವುದಿಲ್ಲ. ಬದಲಿಗೆ 'ಆದ್ಯತಾ ಕುಟುಂಬಗಳು' ಎಂಬ ಪರಿಕಲ್ಪನೆ ಇದ್ದು, ಈ ಆದ್ಯತಾ ಕುಟುಂಬಗಳಿಗೆ ಮಾತ್ರ ಪಡಿತರ ವಿತರಣೆಗೆ ಅವಕಾಶವಿರುತ್ತದೆ. ಎಎವೈ ಮತ್ತು ಬಿಪಿಎಲ್ ಕುಟುಂಬಗಳು ಮಾತ್ರ ಆದ್ಯತಾ ಕುಟುಂಬಗಳೆಂದು ಪರಿಗಣಿಸಲ್ಪಡುತ್ತವೆ.